155 ನೆಲೆ ನಿ-72 (12

4KL
2304

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್, ಶ್ರೀ ಎನ್ ರವಿಕುಮಾರ್ ಹಾಗೂ ಇತರರು ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡುವ ಬಗ್ಗೆ.**

**ಸೂಚನೆ:-**

ಕೇಂದ್ರ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ಇವರ ಒರಿಜಿನಲ್ ಅಪ್ಲಿಕೇಷನ್ ಸಂಖ್ಯೆ:170/00423/2023, ದಿನಾಂಕ:23.04.2024 ರ ಆದೇಶದದಲ್ಲಿ ಬೆಂಗಳೂರು ನಗರ ಉಪ ವಿಭಾಗ, ಬೆಂಗಳೂರು ಇಲ್ಲಿನ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಹುದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಸ್.ಎಫ್.ಎಸ್. ಅಧಿಕಾರಿಯು ನಿಯಮಾನುಸಾರ ಅನರ್ಹರೆಂದು ತಿಳಿಸಿ ಅವರನ್ನು ನಾಲ್ಕು ವಾರದೊಳಗೆ ಬದಲಾಯಿಸಿ ಸದರಿ ಹುದ್ದೆಗೆ ಅರ್ಹ ಅಧಿಕಾರಿಯನ್ನು ನೇಮಿಸುವಂತೆ ಆದೇಶಿಸಿದ್ದರೂ, ಇದುವರೆವಿಗೂ ಸದರಿ ಎಸ್‌ಎಫ್‌ಎಸ್ ಅಧಿಕಾರಿಯನ್ನು ಮುಂದುವರೆಸಿರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರ ಗಮನ ಸೆಳೆಯಬಯಸುತ್ತೇನೆ

**ಹೇಳಿಕೆ:-**

ಐಎಫ್‌ಎಸ್ ವೃಂದದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಸಂರಕ್ಷಣಾಧಿಕಾರಿ ವೃಂದದಲ್ಲಿ ಐಎಫ್‌ಎಸ್ ಅಧಿಕಾರಿಗಳು ಕಡಿಮೆಯಿರುವುದರಿಂದ ಸದರಿ ವೃಂದದ ಹುದ್ದೆಗಳನ್ನು ನಿಮ್ನೀಕರಿಸಿ ಉಪ ಅರಣ್ಯ ಸಂರಕ್ಷಣಾಧಿಕಾರಿ ವೃಂದದ ಕೆಲವು ಐಎಫ್‌ಎಸ್ ಅಧಿಕಾರಿಗಳನ್ನು ಸ್ಥಳನಿಯುಕ್ತಿಗೊಳಿಸಲಾಗಿರುತ್ತದೆ. ಅದರಂತೆ ಬೆಂಗಳೂರು ನಗರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೆ ಐಎಫ್‌ಎಸ್‌ನ ಉಪ ಅರಣ್ಯ ಸಂರಕ್ಷಣಾಧಿಕಾರಿ ವೃಂದದಲ್ಲಿ ಅಧಿಕಾರಿಗಳು ಕಡಿಮೆಯಿರುವುದರಿಂದ ಎಸ್‌ಎಫ್‌ಎಸ್ ವೃಂದದ ಅಧಿಕಾರಿಯನ್ನು ಸ್ಥಳನಿಯುಕ್ತಿಗೊಳಿಸಲಾಗಿರುತ್ತದೆ. ಈ ಬಗ್ಗೆ ಮಾನ್ಯ ಕೇಂದ್ರ ಆಡಳಿತ ನ್ಯಾಯ ಮಂಡಳಿಯು ಬೆಂಗಳೂರು ನಗರ ವಿಭಾಗ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಸ್‌ಎಫ್‌ಎಸ್ ಅಧಿಕಾರಿಯನ್ನು ಬದಲಾಯಿಸಿ ಸೂಕ್ತ ಐಎಫ್‌ಎಸ್ ಅಧಿಕಾರಿಯನ್ನು ನೇಮಿಸುವಂತೆ ತೀರ್ಪು ನೀಡಿದ್ದು, ಸದರಿ ತೀರ್ಪನ್ನು ಅನುಷ್ಠಾನಗೊಳಿಸುವ ಬಗ್ಗೆ ಕ್ರಮವಹಿಸಲಾಗುತ್ತಿದೆ.

**ಸಂಖ್ಯೆ: ಇ-ಸಿಆಸುಇ 63 ಎಸ್‌ಎಫ್‌ಪಿ 2025**

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**



File No. DPAR-SFP/63/2025-DPAR_SERVICES B-DPAR (Computer No. 1723405)
Generated from eOffice by NANDEESH S, DPAR-SERV-B-SA(NS), SENIOR ASSISTANT, DEPARTMENT OF PERSONNEL & ADMINISTRATIVE REFORMS